ಇನ್ನು ಕಾಯಿಲೆ ವಿಚಾರದಲ್ಲಿ ಹೇಳುವುದಾದರೆ, ನಾನು ನನ್ನ ಕಾಯಿಲೆಯನ್ನು ರಿಪೇರಿ ಮಾಡಿಸಿ ಕೊಳ್ಳಲಿಕ್ಕೆ ಆಲ್ಲಿಗೆ ಹೋಗಲಿಲ್ಲ. ಮತ್ತು ಅಲ್ಲಿಗೆ ಚೆನ್ನಾಗಿ ಕೆಲಸದ ಒತ್ತಡದಿಂದಾಗಿ ಕಾಯಿಲೆ ಕಡೆಗೆ ಗಮನವನ್ನು ಕೂಡ ಕೊಡಲಿಕ್ಕೆ ಆಗಲಿಲ್ಲ, ಸಮಯವೂ ಸಿಗಲಿಲ್ಲ. ಮಾನ್ಯ ಸದಸ್ಯರು ಹೇಳಿರುವುದನ್ನು ಜ್ಞಾಪಿಸಿಕೊಂಡು ಈ ಸಾರಿ ಹೋದರೆ ಕಾಯಿಲೆ ಬಗ್ಗೆ ಗಮನ ಕೊಡುತ್ತೇನೆ.

ಅಫ್ಜಲ್‌ಪುರ ತಾಲ್ಲೂಕಿನಲ್ಲಿ ಪಶುವೈದ್ಯ ಶಾಲೆ

೭೯ (೩೭೮) ಶ್ರೀ ಎಂ. ವಿ. ಗುತ್ತೇದಾರ್ (ಅಫ್ಜಲ್‌ಪುರ).—ಮಾನ್ಯ ಪಶುಸಂಗೋಪನಾ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ:—

ಅ) ಅಫ್ಜಲ್‌ಪುರ ತಾಲ್ಲೂಕಿನ ಕರ್ಜಗಿ ಮತ್ತು ಆತನೂರು ಹೋಬಳಿಗಳಲ್ಲಿ ಪಶುವೈದ್ಯಶಾಲೆಗಳ ಕೊರತೆ ಇರುವುದು ಸರಕಾರದವರ ಗಮನಕ್ಕೆ ಬಂದಿದೆಯೇ ?

ಆ) ಈ ಆಸ್ಪತ್ರೆಗಳು ಸಾರ್ವಜನಿಕರ ಅದರಲ್ಲೂ ರೈತರ ಹಿತದೃಷ್ಟಿಯಿಂದ ಅತ್ಯವಶ್ಯವಾಗಿರುವುದರಿಂದ ಈ ವರ್ಷವೇ ಈ ಆಸ್ಪತ್ರೆಗಳನ್ನು ಸರ್ಕಾರದವರು ಮಂಜೂರು ಮಾಡುವರೆ ?

ಇ) ಭತ್ತರಗಳ ಮತ್ತು ನಾಗನೂರು ಗ್ರಾಮಸ್ಥರಿಂದ ದನಗಳ ಆಸ್ಪತ್ರೆಯ ಸಲುವಾಗಿ ಈಗಾಗಲೇ ಜಾಗವನ್ನು ಕೊಂಡಿದ್ದರೂ, ಇಲ್ಲಿಯವರೆಗೆ ಆಸ್ಪತ್ರೆ ಕೆಲಸ ಪ್ರಾರಂಭಿಸದಿರಲು ಕಾರಣವೇನು, ಹಾಗೂ ಇದನ್ನು ಶೀಘ್ರವಾಗಿ ಪ್ರಾರಂಭಿಸಲಾಗುವುದೆ ?

ಶ್ರೀ ಸಿದ್ದರಾಮಯ್ಯ (ಪಶುಸಂಗೋಪನಾ ಸಚಿವರು).—

ಅ) ಬಂದಿದೆ.

ಆ) ಪ್ರಸಕ್ತ ಸಾಲಿನಿಂದ ಇಲಾಖೆಯ ಎಲ್ಲಾ ಪಶುವೈದ್ಯ ಶಾಲೆಗಳನ್ನು ಆಯಾ ಜಿಲ್ಲಾ ಪರಿಷತ್ತುಗಳ ಅಧಿಕಾರ ವ್ಯಾಪ್ತಿಗೆ ವರ್ಗಾಯಿಸಿರುವುದರಿಂದ ಇನ್ನು ಮುಂದೆ ಹೊಸ ಪಶುವೈದ್ಯ ಶಾಲೆಗಳನ್ನು ತೆರೆಯುವುದು ಆಯಾ ಜಿಲ್ಲಾ ಪರಿಷತ್ತುಗಳಿಗೆ ಸೇರಿರುತ್ತದೆ.

ಇ) ಇದೂ ಸಹ ಗುಲ್ಬರ್ಗಾ ಜಿಲ್ಲಾ ಪರಿಷತ್ತಿನ ಕಾರ್ಯ ವ್ಯಾಪ್ತಿಯಲ್ಲಿ ಬರುತ್ತದೆ.

ಶ್ರೀ ಎಂ. ವಿ. ಗುತ್ತೇದಾರ್.—ಕಳೆದ ಸಲ ಇಲ್ಲಿ ಇದೇ ವಿಷಯವನ್ನು ನಾನು ಪ್ರಸ್ತಾಪಿಸಿದ್ದಾಗ ಆಸ್ಪತ್ರೆ ಕೊಡುವ ಭರವಸೆಯನ್ನು ಮಂತ್ರಿಗಳು ಕೊಟ್ಟಿದ್ದರು. ಆದರೆ ಈಗ ಜಿಲ್ಲಾಪರಿಷತ್ತುಗಳಿಗಾಗಿ ಅವುಗಳಿಗೆ ಸೇರಿದ್ದೆಂದು ಹೇಳುತ್ತಿದ್ದಾರೆ. ಅಲ್ಲಿ ಆವರನ್ನು ನಾನು ಕೇಳಿದರೆ ದುಡ್ಡಿಲ್ಲ ಸ್ವಾಮಿ ಎನ್ನುತ್ತಾರೆ. ಅಷ್ಟೇ ಅಲ್ಲ, ಅನೇಕ ಆಸ್ಪತ್ರೆಗಳಲ್ಲಿ ಮೆಡಿಸಿನ್ ಇಲ್ಲ. ಇಂಥಾ ಸ್ಥಿತಿ ನಡೆಯುತ್ತಿರುವಾಗ ಇದಕ್ಕೆ ವಿಶೇಷವಾಗಿ ಏನಾದರೂ ಫೈನಾನ್ಷಿಯಲ್ ಹೆಲ್ಪ್ ಮಾಡುತ್ತೀರಾ ?

ಶ್ರೀ ಸಿದ್ದರಾಮಯ್ಯ.—ಹೌದು, ಕಳೆದಬಾರಿ ಅವರು ಕೇಳಿದಾಗ ಅಲ್ಲಿ ಪಶುವೈದ್ಯಶಾಲೆ ಆಗತ್ಯವಿದೆ ಎಂದು ಹೇಳಿದ್ದೆ. ಈ ವರ್ಷದಿಂದ ಜಿಲ್ಲಾಪರಿಷತ್ತುಗಳ ಆಸ್ತಿತ್ವಕ್ಕೆ ಬಂದ ಮೇಲೆ ಎಲ್ಲಾ ಪಶುವೈದ್ಯಶಾಲೆಗಳೂ ಅವುಗಳ ವ್ಯಾಪ್ತಿಗೆ ಬಂದಿರುತ್ತವೆ. ಆದ್ದರಿಂದ ಇನ್ನು ಮುಂದೆ ನಾವು ಮಂಜೂರು ಮಾಡುವ ವಿಚಾರ ಬರುವುದಿಲ್ಲ. ಆದರೆ ಇವರು ಯಾವ್ಯಾವ ಆಸ್ಪತ್ರೆಯಲ್ಲಿ ಔಷಧಗಳಿಲ್ಲ ಎಂದು ಹೇಳಲಿ, ನಾನು ಅಲ್ಲಿಗೆ ಔಷಧಗಳನ್ನು ಸರಬರಾಜು ಮಾಡುವುದಕ್ಕೆ ಪ್ರಯತ್ನ ಮಾಡುತ್ತೇನೆ.

(ಗೊಂದಲ)

ಶ್ರೀ ಎನ್. ಧರ್ಮಸಿಂಗ್.—ಅಧ್ಯಕ್ಷರೇ, ಇವರು ಈ ರೀತಿ ಹೇಳುವುದನ್ನು ನೋಡಿದರೆ...

(ಗೊಂದಲ)

ಅಧ್ಯಕ್ಷರು.—ನೋಡಿ, ನನಗೆ ಜವಾಬ್ದಾರಿ ಇದೆ.

ಶ್ರೀ ಎನ್. ಧರ್ಮಸಿಂಗ್.—ನಮಗೂ ಜವಾಬ್ದಾರಿ ಇದೆ.

ಅಧ್ಯಕ್ಷರು.—ನನ್ನ ಜವಾಬ್ದಾರಿ ಪ್ರಕಾರ ಈಗ ಕೊಶ್ಚನ್ ಆವರ್ ಮುಗಿಯಲಿ ಎಂದು ಎಲ್ಲಿರಿಗೂ ಅವಕಾಶ ಕೊಟ್ಟಿದ್ದೇನೆ. ಎರಡೆರಡು ಉಪಪ್ರಶ್ನೆ ಮಾತ್ರ ಕೇಳಬೇಕೆಂದು ಹೇಳಿದ್ದೆನು. ಆಗ ನೀವಿರಲಿಲ್ಲ. ಈಗ ಮಾನ್ಯ ಗುತ್ತೇದಾರ್‌ರವರ್ ನಿಮ್ಮನ್ನು ಕೇಳಲು ಬಿಟ್ಟರೆ ಹೇಳಿ.

ಶ್ರೀ ಎನ್. ಧರ್ಮಸಿಂಗ್.—ಜಿಲ್ಲಾ ಪರಿಷತ್ತುಗಳನ್ನು ಕೇಳಿದರೆ ನಮಗೆ ದುಡ್ಡೇ ಬಂದಿಲ್ಲ ಸ್ವಾಮಿ ಎನ್ನುತ್ತಾರೆ. ಆದ್ದರಿಂದ ಮಂತ್ರಿಗಳು ಯಾವ್ಯಾವ ಜಿಲ್ಲಾ ಪರಿಷತ್ತುಗಳಿಗೆ ಎಷ್ಟಷ್ಟು ಮೊಬಲಗಳನ್ನು ಬಿಡುಗಡೆ ಮಾಡಲಾಗಿವೆ ಎಂಬುದನ್ನು ಹೇಳಲಿ. ಆಗ ಗೊತ್ತಾಗುವುದು.

ಶ್ರೀ ಸಿದ್ದರಾಮಯ್ಯ.—ಹೊಸ ಜಿಲ್ಲಾ ಪರಿಷತ್ತಿನ ನಿಯಮಾವಳಿ ಪ್ರಕಾರ ಪಶುವೈದ್ಯ ಶಾಲೆಗಳನ್ನು ತೆರೆಯುವುದಾಗಲೀ, ಆಥವಾ ಗ್ರಾಮೀಣ ಪಶುಶಾಲೆಗಳನ್ನು ಮೇಲ್ಪಟ್ಟಕ್ಕೆ ಏರಿಸುವ ಅಧಿಕಾರವು ಜಿಲ್ಲಾಪರಿಷತ್ತುಗಳಿಗಿದೆ. ಆದ್ದರಿಂದ ಅವರು ಮುಂದಿನ ವರ್ಷ ತಮ್ಮ ಪ್ಲಾನನ್ನು ಮಾಡುವಾಗ ಎಲ್ಲೆ ಆಸ್ಪತ್ರೆ ತೆರೆಯಬೇಕು ಏಂದು ತೀರ್ಮಾನ ಮಾಡಬೇಕಾಗುತ್ತದೆ.

ಅಧ್ಯಕ್ಷರು.—ಎಲ್ಲರೂ ಮಾತನಾಡಿ. ಏನು ಮಾಡುವುದು ?

ಶ್ರೀ ಸಿದ್ದರಾಮಯ್ಯ.—ಅಧ್ಯಕ್ಷರೇ, ಜಿಲ್ಲಾಪರಿಷತ್ತು ಮಸೂದೆ ಒಪ್ಪಿಗೆಗೆ ಇಲ್ಲಿ ಬಂದಾಗ ಇವರೆಲ್ಲಾ ಒಪ್ಪಿಗೆ ಕೊಟ್ಟು ಅಧಿಕಾರವನ್ನು ಅದಕ್ಕೆ ವಿಕೇಂದ್ರೀಕರಣ ಮಾಡಿದ್ದಾರೆ. ಅದರಂತೆ ಪಶು ವೈದ್ಯ ಶಾಲೆಗಳನ್ನು ತೆಗೆಯುವ ಅಧಿಕಾರವನ್ನು ಜಿಲ್ಲಪರಿಷತ್ತುಗಳಿಗೆ ಕೊಟ್ಟಿದ್ದೇವೆ ಆದರೆ ಅವು ಈ ವರ್ಷವೋ ತೆರೆಯಲು ಅವುಗಳ ಬಳಿ ಹಣ ಇಲ್ಲ. ಮುಂದಿನ ವರ್ಷ ತೆಗೆಯಬಹುದು.

ಶ್ರೀ ಎಂ. ವಿ. ಗುತ್ತೇದಾರ್.—ಕರ್ಜಗಿ ಮತ್ತು ಆತ್‌ನೂರು ಹೋಬಳಿಗಳಲ್ಲಿ ಪಶುವೈದ್ಯ ಶಾಲೆಗಳಿಲ್ಲದೆ ತೊಂದರೆಯಾಗಿದೆ.

ಶ್ರೀ ಸಿದ್ದರಾಮಯ್ಯ.—ಈಗಾಗಲೇ ನಾನು ಹೇಳಿದ್ದೇನೆ. ಅವರು ಯಾವ ಆಸ್ಪತ್ರೆಗಳಲ್ಲಿ ಔಷಧಿಗಳಿಲ್ಲವೆಂದು ಹೇಳಿದರೆ ಅಲ್ಲಿಗೆ ಔಷಧವನ್ನು ಕಳಿಸುವ ಪ್ರಯತ್ನ ಮಾಡುತ್ತೇನೆ.

(ಗೊಂದಲ)

ಶ್ರೀ ಕೆ. ಬಿ. ಶಾಣಪ್ಪ.—ಪಶುವೈದ್ಯ ಶಾಲೆಗಳಿಗೆ ಬೇಕಾದಂತಹ ಔಷಧಿಯನ್ನು ಕಳಿಸಿಕೊಟ್ಟಿದೆ. ಎಂದೂ ಕೆಲವು ಆಸ್ಪತ್ರೆಗಳಿಗೆ ಔಷಧಿ ಬರದೇ ಇದ್ದು ಅದನ್ನು ತಮ್ಮ ಗಮನಕ್ಕೆ ತಂದರೆ ವ್ಯವಸ್ಥೆ ಮಾಡುತ್ತೇನೆಂದು ಮಾನ್ಯ ಸಚಿವರು ಹೇಳಿದರು. ಮೆಡಿಸನ್ ಕಳಿಸುವಂತಹ ವ್ಯವಸ್ಥೆಯ ಜವಾಬ್ದಾರಿಯನ್ನು ನೀವು ಇಟ್ಟುಕೊಂಡಿದ್ದೀರಾ ?

(ಗೊಂದಲ)

ಶ್ರೀ ಆರ್. ಎನ್, ನಾಯಕ್.—ಮಾನ್ಯ ಅಧ್ಯಕ್ಷರೇ, ಮಾನ್ಯ ಸಚಿವರು.....

(ಗೊಂದಲ)

ಶ್ರೀ ಆರ್, ವೆಂಕಟರಾಮಯ್ಯ.—ಮೆಡಿಸನ್ ಇಲ್ಲದಿದ್ದರೆ ನನ್ನ ಕಡೆಗೆ ಬನ್ನಿ ಎಂದು ಹೇಳುತ್ತಿದ್ದೀರಿ

ಶ್ರೀ ಸಿದ್ದರಾಮಯ್ಯ.—ಅಧಿಕಾರ ವರ್ಗಾವಣೆ ಮಾಡುವಾಗ ಕೆಲವು ಅಧಿಕಾರಿಗಳನ್ನು ಜಿಲ್ಲಾ ಪರಿಷತ್ತಿಗೆ ಕೊಟ್ಟು ಕೆಲವು ಅಧಿಕಾರಗಳನ್ನು ಸರಕಾರ ಇಟ್ಟುಕೊಂಡಿದೆ ಬೇಕಿದ್ದರೆ ಕಾಯಿದೆಯನ್ನು ಓದಿ ನೋಡಿ.

ಶ್ರೀ ಎನ್. ಧರ್ಮಸಿಂಗ್.—೧೯೮೭-೮೮ರಲ್ಲಿ ಎಷ್ಟು ಹಣವನ್ನು ರಾಯಚೂರು ಜಿಲ್ಲೆಗೆ ಮೆಡಿಸನ್‌ಗೆಂದು ಬಿಡುಗಡೆ ಮಾಡಿದ್ದೀರಿ ?

ಶ್ರೀ ಸಿದ್ದರಾಮಯ್ಯ.—ಎಲ್ಲಾ ಪಶುವೈದ್ಯ ಶಾಲೆಗಳಿಗೂ ಕೂಡ ಎಷ್ಟು ಮೆಡಿಸನ್ ಅಷ್ಟನ್ನು ಸರಬರಾಜು ಮಾಡಿದ್ದೇವೆ.

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.—ಇದು ವ್ಯವಸ್ಥೆ ಅಲ್ಲ ಅವ್ಯವಸ್ಥೆ.

ಶ್ರೀ ಕೆ.ಬಿ. ಶಾಣಪ್ಪ,,—ನಾನು ಹೇಳುತ್ತಿಲ್ಲ ಮಾನ್ಯ ಮಾಲೀಕಯ್ಯ ಗುತ್ತೇದಾರ್‌ರವರಂ ಹೇಳುತ್ತಿದ್ದಾರೆ.

ಶ್ರೀ ಸಿದ್ದರಾಮಯ್ಯ.—ಎಲ್ಲ ಪಶುವೈದ್ಯ ಶಾಲೆಗಳಿಗೂ ಕೂಡ ಎಷ್ಟು ಬೇಕೂ ಅಷ್ಟನ್ನು ಬಿಡುಗಡೆ ಮಾಡಿದ್ದೇವೆ. ಎಲ್ಲಿ ಕೊರತೆ ಇದೆಯೆಂದು ಹೇಳಿದರೆ ಅಲ್ಲಿ ಔಷಧಿಗಳನ್ನು ಸರಬರಾಜು ಮಾಡುತ್ತೇವೆ.

(ಗೊಂದಲ)

ಶ್ರೀ ಆರ್. ಎನ್. ನಾಯಕ್.—ಮಾನ್ಯ ಅಧ್ಯಕ್ಷರೇ.....

ಅಧ್ಯಕ್ಷರು.—ತಾವು ಕುಳಿತುಕೊಳ್ಳಿ ನಾನು ಅವಕಾಶ ಕೊಡುವುದಿಲ್ಲ.

ತುಂಗಭದ್ರ ಪಾಲಿ ಫೈಬರ್ಸ್ ಲಿಮಿಟೆಡ್ ಕಾರ್ಖಾನೆಯ ಬಗ್ಗೆ

೮೦ (೪೨೨) ಶ್ರೀ ಯು ಭೂಪತಿ (ಸಂಡೂರು).—ಮಾನ್ಯ ಭಾರಿ, ಮಧ್ಯಮ ಕೈಗಾರಿಕಾ ಹಾಗೂ ವಿದ್ಯುಚ್ಛಕ್ತಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೆ;—

ಅ) ತುಂಗಭದ್ರ ಫೆಬರ್ಸ್ ಲಿಮಿಟೆಡ್ ಕಾರ್ಖಾನೆಯು ಸ್ಥಾಪಿತವಾದದ್ದು ಯಾವಾಗ ?

ಆ) ಮುನಿರಾಬಾದ್ (ಹೊಸಪೇಟೆ)ಯಲ್ಲಿ ಸ್ಥಾಪಿತವಾದ ಸದರಿ ಕಾರ್ಖಾನೆಯ ಒಟ್ಟು ಬಂಡವಾಳವೆಷ್ಟು ಹಾಗೂ ಬಂಡವಾಳ ಮೂಲ ಯಾವುವು ?

ಇ) ಸದರಿ ಕಾರ್ಖಾನೆಯಲ್ಲಿರುವ ಯಂತ್ರಗಳನ್ನು ಯಾವ್ಯಾವ ದೇಶಗಳಿಂದ ಖರೀದಿ ಮಾಡಲಾಗಿದೆ ಹಾಗೂ ಅವುಗಳ ಬೆಲೆಯೇನು ?

ಈ) ಸದರಿ ಕೈಗಾರಿಕೆಯಲ್ಲಿ ಉತ್ಪಾದನೆಯನ್ನು ನಿಲ್ಲಿಸಿರುವುದಕ್ಕೆ ಕಾರಣವೇನು ?

ಉ) ಆಧುನಿಕ ತಂತ್ರಜ್ಞಾನವುಳ್ಳ ಸದರಿ ಕಾರ್ಖಾನೆಯ ಉತ್ಪಾದನೆಯನ್ನು ಆರಂಭಿಸುವಂತೆ ಮಾಡಲು ಸರ್ಕಾರದವರು ಕೈಗೊಂಡಿರುವ ಕ್ರಮಗಳೇನು ?

ಹೆಚ್. ಪಟೇಲ್ (ಕೈಗಾರಿಕಾ ಮತ್ತು ವಿದ್ಯುಚ್ಛಕ್ತಿ ಸಚಿವರು).—

ಅ) ಕಾರ್ಖಾನೆಯು ಜನವರಿ ೧೯೭೮ರಲ್ಲಿ ಸ್ಥಾಪಿತವಾಯಿತು, ಉತ್ಪಾದನೆಯು ಆಗಸ್ಟ್ ೧೯೮೪ರಲ್ಲಿ ಪ್ರಾರಂಭವಾಯಿತು.

ಆ) ವಿವರಗಳನ್ನು ಅನುಬಂಧ 'ಅ' ನಲ್ಲಿ ಬಿಗಡಾಯಿಸಲಾಗಿದೆ.

ಇ) ಕಾರ್ಖಾನೆಯ ಯಂತ್ರಗಳನ್ನು ಜಪಾನಿನ ವಿಟ್ಸು ಬಿಸಿ ರೇಯಾನ್ ಕಂಪನಿಯಿಂದ ೯೨೫.೩೦ ಲಕ್ಷ ರೂಗಳನ್ನು ಕೊಟ್ಟು ಪಡೆದುಕೊಳ್ಳಲಾಗಿದೆ.

ಈ) ಉತ್ಪಾದನೆಯನ್ನು ನಿಲ್ಲಿಸಿರುವ ಕಾರಣ ಅಧಿಕವಾದ ನಷ್ಟ, ಅನಾನುಕೂಲ ಮಾರುಕಟ್ಟೆ ಪರಿಸ್ಥಿತಿ ಮತ್ತು ವ್ಯವಹಾರ ಬಂಡವಾಳವಿಲ್ಲದೇ ಇರುವುದು.

ಉ) ಕೇಂದ್ರೀಯ ಹಣಕಾಸು ಸಂಸ್ಥೆಗಳು ಮತ್ತು ಕೇಂದ್ರ ಸರ್ಕಾರದೊಡನೆ ಕಾರ್ಖಾನೆಯನ್ನು ಮತ್ತೆ ಪ್ರಾರಂಭಿಸುವ ಬಗ್ಗೆ ಮತ್ತು ಪಾಲಿನಾಸಿಕ್ ನೂಲಿನ ಮೇಲಿನ ಎಕ್ಸೈಸ್ ಸುಂಕವನ್ನು ಕಡಿಮೆ ಮಾಡಲು ಸಂಸ್ಥೆಗಳು ಮತ್ತು ಕೇಂದ್ರ ಸರ್ಕಾರದೊಡನೆ ವ್ಯವಹರಿಸಲಾಗುತ್ತಿದೆ.

ANNEXURE—A

ಅನುಬಂಧ 'ಅ'

ಪ್ರಶ್ನೆ 'ಅ'ಕ್ಕೆ ಸಂಬಂಧಿಸಿದಂತೆ ವಿವರಗಳು:—

TUNGABHADRA FIBRES LIMITED

PROJECT COST;	Rs. in lakhs
orignal assessment june 1979 (BY IDBI)	3,000.000
First over run March 1983	3,800.000
Second over run April	4,724.000